716 (644) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :– ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಡುಪಿ ಮತ್ತು ದಕ್ಷಿಣ ಜಿಲ್ಲೆಯಲ್ಲಿ ಯಾವ ಯಾವ ವಿಧಾನಸಭಾ ಕ್ಷೇತ್ರದಲ್ಲಿ ಮೀನುಗಾರಿಕೆ ಮನೆಗಳನ್ನು ಕೋರಿ ಎಷ್ಟೆಷ್ಟು ಅರ್ಜಿಗಳನ್ನು ಬಂದಿರುತ್ತದೆ. (ಕ್ಷೇತ್ರವಾರು ವಿವರ ನೀಡುವುದು) ;

ಆ) 2006–07ನೇ ಸಾಲಿನಲ್ಲಿ ಈ ಎರಡು ಜಿಲ್ಲೆಗಳಲ್ಲಿ ತಲಾ ಎಷ್ಟು ಮನೆಗಳು ಮಂಜೂರಾಗಿರುತ್ತದೆ ; ಮಂಜೂರು ಪತ್ರ ನೀಡಲಾಗಿದೆಯೇ ;

ಇ) ಇದಕ್ಕಾಗಿ ಸರ್ಕಾರ ಬಿಡುಗಡೆಗೊಳಿಸಿದ ಹಣ ಎಷ್ಟು ?

ಶ್ರೀ ನಾಗರಾಜ ಶೆಟ್ಟಿ ಬಿ. (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :–

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 2716 ಮೀನುಗಾರಿಕಾ ಮನೆಗಳ ಬೇಡಿಕೆ ಬಂದಿರುತ್ತದೆ. ಕ್ಷೇತ್ರವಾರು ವಿವರ ಕೆಳಕಂಡಂತಿದೆ.

ವಿಧಾನ ಸಭಾ ಕ್ಷೇತ್ರ		ಮನೆಗಳ ಬೇಡಿಕೆ ಸಂಖ್ಯೆ
ದಕ್ಷಿಣ ಕನ್ನಡ :–		
1. ಉಳ್ಳಾಲ	...	36
2. ಮಂಗಳೂರು	...	30
3. ಸುರತ್ಕಲ್	...	15
4. ಮುಲ್ಕಿ–ಮೂಡಬಿದ್ರೆ	...	25
5. ಬಂಟ್ವಾಳ	...	25
6. ಸುಳ್ಯ	...	15
7. ಪುತ್ತೂರು	...	15
8. ವಿಟ್ಲ	...	20
9. ಬೆಳ್ತಂಗಡಿ	...	20
	ಒಟ್ಟು	201
ಉಡುಪಿ :–		
10. ಕಾಪು	...	150
11. ಉಡುಪಿ	...	260
12. ಬ್ರಹ್ಮಾವರ	...	520
13. ಕುಂದಾಪುರ	...	750
14. ಬೈಂದೂರು	...	810
15. ಕಾರ್ಕಳ	...	25
ಒಟ್ಟು	...	2515

ಆ)2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 190 ಮತ್ತು ಉಡುಪಿ ಜಿಲ್ಲೆಗೆ 350 ಮನೆಗಳು ಮಂಜೂರಾಗಿರುತ್ತದೆ. ಇವುಗಳ ಪೈಕಿ 489 ಮನೆಗಳಿಗೆ ಫಲಾನುಭವಿಗಳನ್ನು ಅನುಮೋದಿಸಿ ಮಂಜೂರು ಪತ್ರ ನೀಡಲಾಗಿದೆ.

ಇ) ಮತ್ಸ್ಯಾಶ್ರಯ 3ನೇ ಹಂತದ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಮಂಜೂರಾದ 540 ಮನೆಗಳ ನಿರ್ಮಾಣಕ್ಕೆ ತಗಲುವ ಒಟ್ಟು ವೆಚ್ಚ ರೂ. 2.16 ಕೋಟಿಗಳನ್ನು ನೋಡೆಲ್ ಏಜೆನ್ಸಿಗೆ ಬಿಡುಗಡೆಗೊಳಿಸಲಾಗಿದೆ. ಇದರಲ್ಲಿ ಪ್ರಗತಿ ಆಧರಿಸಿ ರೂ. 61.25 ಲಕ್ಷಗಳನ್ನು ಫಲಾನುಭವಿಗಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.

720 (1024) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯಾತ್ ಖಾನ್(ಹುಬ್ಬಳ್ಳಿ) :–

ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಪಿಎಲ್ ಕಾರ್ಡುದಾರರಿಗೆ ಗೋಧಿ, ಸಕ್ಕರೆ, ಅಕ್ಕಿ, ಸೀಮೆಎಣ್ಣೆಯನ್ನು ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತದೆ (ವಿವರ ನೀಡುವುದು)

ಆ) ಸರ್ಕಾರ ಈ ವ್ಯವಸ್ಥೆಯನ್ನು ಬದಲಿಸಿ ಯೂನಿಟ್ ಪದ್ಧತಿಯಲ್ಲಿ ವಿತರಣೆ ಮಾಡುವಂತೆ ಸುತ್ತೋಲೆ ಹೊರಡಿಸಿರುವುದು ನಿಜವೇ ಯಾಗಿದ್ದಲ್ಲಿ ಪಡಿತರದಾರರಿಗೆ ತೊಂದರೆ ಆಗುವುದಿಲ್ಲವೆ ;

ಇ) ಪ್ರಸ್ತುತ ಆಹಾರಧಾನ್ಯ ವಿತರಣೆ ಮಾಡುತ್ತಿರುವ ಆಧಾರವೇನು ?

ಶ್ರೀ ಗೋವಿಂದ ಎಂ. ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :–

ಅ) ರಾಜ್ಯದಲ್ಲಿ ಬಿಪಿಎಲ್ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆ.ಜಿ. ಅಕ್ಕಿ, 1 ಕೆ.ಜಿ. ಗೋಧಿ/ರಾಗಿ ಪ್ರತಿ ಚೀಟಿಗೆ ಗರಿಷ್ಠ 25 ಕೆ.ಜಿ. ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು ಹಂಚಿಕೆ ನೀಡಲಾಗುತ್ತಿದೆ. ಸಕ್ಕರೆಯನ್ನು ಪ್ರತಿ ಪಡಿತರ ಚೀಟಿಗೆ 1,200 ಗ್ರಾಂ. ನಂತೆ ಹಂಚಿಕೆ ಮಾಡಲಾಗುತ್ತಿದೆ. ಅಕ್ಕಿ ಮತ್ತು ಗೋಧಿ ಎರಡನ್ನು ಪ್ರತಿ ಕೆ.ಜಿ.ಗೆ ರೂ. 3.00 ರಂತೆ ಹಾಗೂ ಸಕ್ಕರೆಯನ್ನು ಪ್ರತಿ ಕೆ.ಜಿ.ಗೆ ರೂ. 13.50 ರಂತೆ ವಿತರಿಸಲಾಗುತ್ತದೆ.

ಸೀಮೆ ಎಣ್ಣೆ	ಪ್ರಮಾಣ (ಲೀ)	ದರ (ರೂ)
ಅನೌಪಚಾರಿಕ ಪಡಿತರ ಪ್ರದೇಶ	7	9.30 ರಿಂದ 10.10
ಪಟ್ಟಣ	6	
ಗ್ರಾಮಾಂತರ	4	

ಅ) ಹೌದು

ಈ ಮೊದಲು ಇಡಿಗಂಟಾಗಿ ಆಹಾರಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಸದಸ್ಯರ ಸಂಖ್ಯೆಯನ್ನು ಪರಿಗಣಿಸದೇ ಒಬ್ಬ ಅಥವಾ ಇಬ್ಬರು ಸದಸ್ಯರಿರುವ ಕುಟುಂಬಗಳಿಗೂ ಹಾಗೂ ಹೆಚ್ಚಿನ ಸಂಖ್ಯೆಯ ಸದಸ್ಯರಿರುವ ಕುಟುಂಬಗಳಿಗೂ ಒಂದೇ ಪ್ರಮಾಣದ ಅಂದರೆ, 20 ಕೆ.ಜಿ. ಅಕ್ಕಿ ಹಾಗೂ 5 ಕೆ.ಜಿ. ಗೋಧಿಯನ್ನು